Doc-495
T-P-2

Reg No 8 G 155 15—6—72

55th Year of Publication ‘Satyavadi’ daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಆರಮನೆ ಬರಸ್ಕೆದಾರ್ ಎಂ ವಿ ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಧಾನ್ಯ ಲೆವಿ ಬೆಲೆಯ ಪುನರ್ವಿಮರ್ಶೆ

ಗಡಿವ್ಯಾಜ್ಯ

ಬೊಂಬಾಯಿ — ಮಹಾರಾಷ್ಟ್ರ–ಮೈಸೂರು ಗಡಿ ವ್ಯಾಜ್ಯ ಪರಿಹಾರಕ್ಕೆ ಅನೇಕ ಬೇರೆಬೇರೆ ಸೂತ್ರಗಳನ್ನು ಪ್ರಧಾನಿಯವರು ಬೋಧಿಸುತ್ತಿರುವುದಾಗಿ ಮಹಾರಾಷ್ಟ್ರ ಮುಖ್ಯ ಮಂತ್ರಿ ಶ್ರೀ ನಾಯಿಕ್ ಶಾಸನ ಸಭೆಯಲ್ಲಿ ಹೇಳಿದರು.

ಹಿಂದೂ ಸಾಗರ

ವಾಷಿಂಗ್ಟನ್— ಹಿಂದೂ ಸಾಗರದಲ್ಲಿ ಅನರ್ಥಕಾರಿಯಾದ ಆಯುಧ ಘರ್ಷಣೆ ತಪ್ಪಿಸಲು, ಅದನ್ನು ತಟಸ್ಥ ವಲಯವಾಗಿರಿಸುವುದು ಅವಶ್ಯವೆಂದು ಪ್ರಕಟವಾಗಿದೆ.

★

ಶಾಸನ ಸಭೆಯಲ್ಲಿ

ಬೊಂಬಾಯಿ— ಶಾಸನಸಭೆಯಲ್ಲಿ ಇಬ್ಬರು ವಿರೋಧ ಪಕ್ಷದ ಸದಸ್ಯರನ್ನು ಹೊರಗೆಹಾಕಲು ಸ್ಪೀಕರು ಮಾರ್ಷಲ್ ಮತ್ತು ರಕ್ಷಣ ತಂಡವನ್ನು ಕರೆಸಿದರು — ಆದರೆ ಆ ವಿರೋಧ ಪಕ್ಷದ ಸದಸ್ಯರು ನಿಂತು ಕಾರ್ಯ ನಡೆಯಲು ಅವಕಾಶ ಕೊಡಲಿಲ್ಲ.

★

ಲೆವಿ ಬೆಲೆ

ಭದ್ರಾವತಿ— ಲೆವಿ ಬೆಲೆಯನ್ನು ಪುನರ್ವಿಮರ್ಷಿಸಲಾಗುವುದೆಂದು ಆಹಾರ ಮಂತ್ರಿ ಶ್ರೀಮತಿ ಇವಾ ಪಾಸ್ ಭತ್ತ ಬೆಳೆಯುವವರಿಗೆ ಭರವಸೆ ಇತ್ತರು.

★

ಹರತಾಳ

ದುರ್ಗಾಪುರ— ಇಲ್ಲಿಗೆ ಹತ್ತಿರವಿರುವ ಬೆನಾಚಿಟಿಯಲ್ಲಿ ಒಬ್ಬ ವಿದ್ಯಾರ್ಥಿಯನ್ನು ಗುಂಡಿಕ್ಕಿ ಸಾಯಿಸಿದ, ಮತ್ತೊಬ್ಬನನ್ನು ಗಾಯಗೊಳಿಸಿದ ಸಂದರ್ಭದಲ್ಲಿ ಪ್ರತಿಭಟಿಸಲು ಈ ಊರ್ಕೆನ ನಗರದಲ್ಲಿ ಹರತಾಳ ಆಚರಿಸಲಾಯಿತು — ಆ ಘಟನೆ ಸಂಬಂಧದಲ್ಲಿ ಪೋಲೀಸರು 8 ಮಂದಿಯನ್ನು ದಸ್ತಗಿರಿ ಮಾಡಿದ್ದಾರೆ.

ಬಡ್ಜೆಟ್

ಬೆಂಗಳೂರು— ತಾ|| 19 ರಂದು ಆರಂಭವಾಗುವ ಶಾಸನಸಭೆಯಲ್ಲಿ ತಾ|| 21 ರಂದು ರಾಜ್ಯದ 72-73 ರ ಬಡ್ಜೆಟ್ ಮಂಡಿಸಲಾಗುವುದು.

★

ಕೇಳಿಕೆ ದಿನ

ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿದ ಖಾಸಗಿ ಕಾಲೇಜುಗಳ ಉಪಾಧ್ಯಾಯ ಉಪಾಧ್ಯಾಯರು “ಸಾಮೂಹಿಕ ಪಾತ್ರ ಸಂಗಿಕ ರಜಾ” ಪಡೆದ ತಮ್ಮ ‘ಕೇಳಿಕೆ ದಿನ” ವನ್ನಾಗಿ ಆಚರಿಸಲು ನಿರ್ಧರಿಸಿರುವರು.

★

ಜೈಲಿಗೆನುಂತ್ರಿಗಳ ಭೇಟಿ

ಬೆಂಗಳೂರು— ಸ್ಟೇಟ್ ಗೃಹಮಂತ್ರಿ ಶ್ರೀ ಕೆತ್ತೂರ್‌ರವರು, ಈಚೆಗೆ ಕಾರವಾರ ಜಿಲ್ಲಾ ಜೈಲಿಗೆ ಭೇಟಿ ಕೊಟ್ಟು, ಅಲ್ಲಿಯ ಖೈದಿಗಳಿಗಿರುವ ಸೌಕರ್ಯಗಳನ್ನು ಪರಿಶೀಲಿಸಿದರು — ಖೈದಿಗಳಿಗೆ ಉತ್ತಮ ದರ್ಜೆ ಆಹಾರ ಮುಂತಾದ್ದನ್ನು ಕೊಡುವ ಬಗ್ಗೆ ಸಲಹೆ ಮಾಡಿದರು.

★

ಕೊಡಗು ಜಿಲ್ಲೆಗೆ ಪ್ರಥಮ ಸ್ಥಾನ

ಮಡಕೇರಿ— ರಾಜ್ಯದಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಗೊಡ್ಡು ಮಾಡುವುದರಲ್ಲಿ 71-72 ರಲ್ಲೂ ಕೊಡಗು ಜಿಲ್ಲೆಯು ಪ್ರಥಮ ಸ್ಥಾನಪಡೆದಿದೆ.

○

ಎಲ್ಲರಿಗೂ ಉದ್ಯೋಗ

ಬೆಂಗಳೂರು— ಅಕ್ಟೋಬರಿನಿಂದ ಜಾರಿಗೆ ತರಲಿರುವ “ಎಲ್ಲರಿಗೂ ಉದ್ಯೋಗ” ಪ್ರಾಯೋಗಿಕ ಪ್ರಾಜೆಕ್ಟಿಗೆ ಚಿತ್ರದುರ್ಗ ಜಿಲ್ಲೆ ಹರಿಹರ ಆರಿಸಲಾಗಿದೆಯೆಂದು ಕೇಂದ್ರ ವ್ಯವಸಾಯ ಮಂತ್ರಿ ಶ್ರೀ ಷೇರ್ ಸಿಂಗ್ ಹೇಳಿದರು.

ಹೊಸ ಕಮಿಷನರರವರು

ಮೈಸೂರು — ಪುರಸಭೆಯ ಹೊಸ ಕಮಿಷನರ್ ಶ್ರೀ ಜಗದೀಶ್ ಪ್ರಸಾದ್ ರವರು ಮೊನ್ನೆ ಅಧಿಕಾರ ವಹಿಸಿಕೊಂಡರು

★

ಆಂಧ್ರಪ್ರದೇಶದಲ್ಲಿ ಅಗ್ನಿ ಅನಾಹುತಗಳು

ಇಲ್ಲಿ ನಡೆದ ಹಲವು ಅಗ್ನಿಅನಾಹುತಗಳಿಂದ ಬಹುಮಂದಿ ಸಂಕಟಕ್ಕೀಡಾಗಿರುವರು — ಪೆನ್ನಾರು ನದಿ ದಡದಲ್ಲಿ 250 ಜೋಪಡಿಗಳು ಸುಟ್ಟುಹೋದವು — ಬೋಗಿರೆಡ್ಡಿಪಳ್ಳಿಯಲ್ಲಿ 14 ಗುಡಿಸಲುಗಳೂ, 13 ಹಸುವಿನಕೊಟ್ಟಿಗೆಗಳೂ, 17 ಒಣಹುಲ್ಲಿನ ರಾಶಿಗಳೂ ಸುಟ್ಟುಹೋದವು — ಲಕ್ಕಮ್ಮಜಿಲ್ಲಾದಲ್ಲಿ 70 ಮೂಟೆ ಭತ್ತ 2 ಹಸುವಿನಕೊಟ್ಟಿಗೆ ಸುಟ್ಟುಹೋದವು — ವಡಿಯಮುನ್ನಡುವಿನಲ್ಲಿ 4 ಮನೆಗಳೂ, 200 ಮೂಟೆ ಭತ್ತ, 6 ಒಣಹುಲ್ಲುರಾಶಿ, 2 ಹಸುವಿನಕೊಟ್ಟಿಗೆ ಸುಟ್ಟುಹೋದವು — ಗುಡಿವಾಡಾ ಪಟ್ಟಣದಲ್ಲಿ 4ಕ್ಕೆ ಮನೆ, ಅವುಗಳೊಳಗಿದ್ದ ಅಮೂಲ್ಯ ಪದಾರ್ಥಗಳೂ, ಕರೆನ್ಸಿ ನೋಟುಗಳೂ ಸುಟ್ಟುಹೋದವು — ಆನಂದಪುರದಲ್ಲಿ 30 ಮನೆಗಳೂ 2 ಎತ್ತುಗಳೂ 200 ಮೂಟೆ ಆಹಾರಧಾನ್ಯವೂ ಅಗ್ನಿಗೆ ಆಹುತಿಯಾದವು.

ಅರಸ್‌ರವರ ಅದ್ಭುತ ವಿಜಯ

ಬೆಂಗಳೂರು— ಸೋಮವಾರ ನಡೆದ ಹುಣಸೂರು ಕ್ಷೇತ್ರದ ಶಾಸನಸಭೆಯ ಉಪಚುನಾವಣೆಯಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸುರವರು 44004 ವೋಟುಗಳಲ್ಲಿ 37877 ಪಡೆದು ಅದ್ಭುತ ವಿಜಯಗೊಂಡರು.

ಜಾಕಿಗಳು-ಜರ್ನಲಿಲ್ಲ

ಬೆಂಗಳೂರು— ಒಹಿಷ್ಕಾರ ಆಚರಿಸಿರುವ 65 ಜಾಕಿಗಳಿಗೆ ರೇಸ್ ಕ್ಲಬ್ ಈ ನಿರ್ಧಾರವನ್ನು 48 ಗಂಟೆಗಳಲ್ಲಿ ತೆಗೆಯದಿದ್ದರೆ ಅವರ ಲೈಸೆನ್ಸುಗಳನ್ನು ರದ್ದುಪಡಿಸುವುದಾಗಿ ಕೊಟ್ಟ ಕಟ್ಟಕಡೆ ಸೂಚನೆಯನ್ನು ಜಾಕಿ ಸಂಘ ತಿರಸ್ಕರಿಸಿದೆ

ಪರಿಷತ್ತಿಗೆ ಪ್ರೋತ್ಸಾಹ

ಬೆಂಗಳೂರು— ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ಪ್ರಕಟನೆ ಮತ್ತಿತರ ಕಾರ್ಯಗಳಿಗೆ ಸಕಲ ಪ್ರೋತ್ಸಾಹವನ್ನೂ ಸರಕಾರ ನೀಡುವುದಾಗಿ ವಿದ್ಯಾ ಮಂತ್ರಿ ಶ್ರೀ ಬದ್ರಿನಾರಾಯಣ್‌ರವರು ಹೇಳಿದರು.

★

4 ಅಂತಸ್ತಿನ ಮೇಲಿಂದ ಬಿದ್ದು ಸತ್ತ

ಬೆಂಗಳೂರು— ಶಿವಾಜಿ ಸರ್ಕಲ್‌ನಲ್ಲಿ ನಾಲ್ಕು ದಿನಗಳಿಂದ ಒಂದು ಹೋಟಲಿನಲ್ಲಿದ್ದ ಲಕ್ನೋವಿನ ಒಬ್ಬ ಮನುಷ್ಯನು ಆ ಹೋಟಲಿನ 4 ನೇ ಅಂತಸ್ತಿನಿಂದ ಧುಮುಕಿ ಪ್ರಾಣ ಕಳೆದುಕೊಂಡನು.

ಉಪವಾಸ ಬೆದರಿಕೆ

ಚಂಡೀಘರ— ರಾಜ್ಯ ಪುನರ್ವಿಂಗಡನ ಕಾಲದಲ್ಲಿ ಬಿಡಲಾಗಿರುವ, ಅಬೋಹರ್, ಫಾಜಿಲ್ಕಾ, ಮತ್ತಿತರ ಪಂಜಾಬಿ ವಲಾತ ನಾಡುವ ಭಾಗಗಳನ್ನು ಜುಲೈ 14 ರೊಳಗೆ ಪಂಜಾಬು ರಾಜ್ಯಕ್ಕೆ ಸೇರಿಸದಿದ್ದರೆ, ಅಮೃತಸರದ ಸ್ವರ್ಣ ದೇವಾಲಯದಲ್ಲಿ ಅನಿರ್ದಿಷ್ಟ ಕಾಲ ಉಪವಾಸ ಕೈಗೊಳ್ಳುವುದಾಗಿ ಅಕಾಲಿ ದಳ ಕಾರ್ಯದರ್ಶಿ ಶ್ರೀ ಮಹಾಂತ್ ಸೇವಾದಾಸ್ ಹೃಧಾನಿಯವರಿಗೆ ಬರೆದಿರುವುದಾಗಿ ತಿಳಿಸಿರುವರು — ಭಕ್ರಾ ಅಣೆಕಟ್ಟು ಪಂಜಾಬಿನ ಆಡಳಿತಕ್ಕೆ ಸೇರಬೇಕೆಂದೂ ಕೇಳಿರುವರು.

ಸೈನಿಕರ ಮನೆತನ

ಚಂಡಿಘರ— ಮೊದಲನೆ ವಿಶ್ವಯುದ್ಧದಲ್ಲಿ ಸೇವೆ ಸಲ್ಲಿಸಿದ ಈಗ 85 ವರ್ಷವಾಗಿರುವ ಅಮೃತಸರ ಜಲ್ಲೆಯ ತರ್ನತರನ್ ನಿವಾಸಿ ಕರ್ತಾರಸಿಂಗ್‌ರ 7 ಗಂಡುಮಕ್ಕಳೂ ಈಚಿನ ಭಾರತ–ಪಾಕ್ ಯುದ್ಧದಲ್ಲಿ ಸೇವೆ ಸಲ್ಲಿಸಿದರೆಂದು ಪಂಜಾಬು ಸರಕಾರದ “ಸಾದ್ ಪಂಜಾಬ್” ಪತ್ರಿಕೆ ಪ್ರಕಟಿಸಿದೆ — ಕರ್ತಾರ ಸಿಂಗ್‌ರ ಸೊಸೆಯೂ ಸೇರಿ 18 ಮಂದಿ ಇವರ ಸಂಬಂಧೀಕರೂ ಸೈನ್ಯದಲ್ಲಿರುವರೆಂದಾಗಿ ಪ್ರಕಟಿಸಲಾಗಿದೆ.

ಗಂಧದಮರ ವಶ

ಮೈಸೂರು— ಅರಣ್ಯ ಇಲಾಖಾ ಸಂಚಾರಿ ಪಡೆಯವರು ನಗರದ ಎರಡು ಸ್ಥಳಗಳಲ್ಲಿ ರೂ 3416 ಬೆಲೆಯ ಗಂಧದಮರವನ್ನು ವಶಪಡಿಸಿಕೊಂಡರು.

★ ಹುಣಸೂರು ತಾಲ್ಲೂಕು ಹನಗೋಡು ಗ್ರಾಮದಲ್ಲಿ ಮಂಗಳವಾರ ಸರ್ಕಾರಿ ಪ್ರೌಢಶಾಲೆಯ ಪ್ರಾರಂಭೋತ್ಸವವನ್ನು ವಿದ್ಯಾಮಂತ್ರಿ ಶ್ರೀ ಬದರಿನಾರಾಯಣ್ ರವರು, ಮಕ್ಕಳ ಜ್ಞಾನಾಭಿವೃದ್ಧಿಗಾಗಿ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಿಕೊಡುವುದು ನಮ್ಮೆಲ್ಲರ ಪವಿತ್ರ ಕರ್ತವ್ಯ, ಮುಂದಿನ ಜನಾಂಗ ತಮ್ಮ ಕಾಲು ಮೇಲೆ ನಿಲ್ಲುವಂತಾಗಲು ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ತಿಳಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರು ಮಾಡಿದ ಭಾಷಣದಲ್ಲಿ, ಜನರು ತಮ್ಮ ಮಕ್ಕಳನ್ನು ಸೌಕರ್ಯಗಾಗಿ ಮಾತ್ರ ವಿದ್ಯಾಭ್ಯಾಸಮಾಡಿಸುವದು ಎಂಬ ಮನೋಭಾವನೆಯನ್ನು ಬಿಟ್ಟು ಜನರ ಸುಬಾಳ್ವೆಗಾಗಿ ಅವರ ಸರ್ವಾಂಗೀಣ ಅಭಿವೃದ್ಧಿಗಾಗಿ ವಿದ್ಯಾಭ್ಯಾಸಕ್ಕೆ ಮಹತ್ವ ಕೊಡಬೇಕೆಂದು ಹೇಳಿದರು.

●

ತೋಟಗಾರಿಕೆ ಇಲಾಖಾ ಕಛೇರಿ

ಗುಂಡ್ಲುಪೇಟೆಯಲ್ಲಿ ಮಂಗಳವಾರ ತೋಟಗಾರಿಕೆ ಇಲಾಖೆಯ ತಾಲ್ಲೂಕು ಮಟ್ಟದ ಕಛೇರಿಯ ಕಟ್ಟಡವನ್ನು ಉದ್ಘಾಟಿಸುತ್ತಾ, ಅರಣ್ಯ ಇಲಾಖಾ ಮಂತ್ರಿ ಶ್ರೀ ಕೆ. ಹೆಚ್. ಪಾಟೀಲರು– ರಾಷ್ಟ್ರದ ಬೆನ್ನೆಲುಬು ಹಾಗೂ ನಮ್ಮೆಲ್ಲರ ಅನ್ನದಾತ ಕರ್ಮಯೋಗಿ ರೈತನ ಸೇವೆಯನ್ನು ಸರ್ಕಾರದ ಅಧಿಕಾರಿಗಳು ಹಾಗೂ ಜನತಾ ಮುಖಂಡರುಗಳು ಬಿಚ್ಚುಮನಸ್ಸಿನಿಂದ ಮಾಡಿದ್ದಲ್ಲಿ ಜನತೆಗೂ ಹಾಗೂ ರಾಷ್ಟ್ರಕ್ಕೂ ದ್ರೋಹಮಾಡಿದಂತಾಗುತ್ತದೆ, ಎಂದು ಹೇಳಿದರು.

Contribute Liberally

to the National Defence Fund

ವುಡ್‌ಲ್ಯಾಂಡ್ 16-6-72ರಿಂದ ಆಮೋಘ 7 ನೇ ವಾರ

.... ಚಿತ್ತಾಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ: ರಾತಿ ಸಹೋದರರು ನಿರ್ಮಾಪಕರು: ಎಂ ಜಿ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಸಂಜೆಹಬ್ಬ

ಅಪೆರಾ 16 6 72 ರಿಂದ

.... ಮನಸೋಹಕ ಹಿಂದಿ ಚಿತ್ರ ....

ರಾಜಾ ನಾ ಬ್

ಈಸ್ಟ್‌ಮನ್‌ಕಲರ್

ಪಾತ್ರ: ಶಶಿಕಪೂರ್ ನಂದ ರಾಜೇಂದ್ರನಾಥ್ ಆಶಾ

ದಿಗ್ದರ್ಶನ: ಸೂರಜ್ ಪ್ರಕಾಶ್ ಸಂಗೀತ: ಕಲ್ಯಾಣ್‌ಜಿ ಆನಂದಜಿ

ದಿನ 3 ಆಟಗಳು

Edited Printedand Published by Dharmapracharanirata
M S Krishna Rao (Propretor) at the Satvvadi Press
Chamarajapuram Mysore 4

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ 'ಕಲ್ಪನೆ'
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ಠವರ ಚೊಚ್ಚಲು ಚಿತ್ರ

ಆನೆ-ಹುಡುಗ

SHAKTI SUDHA

A Superb Tonic

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಶೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....